ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

**ವಲಯ ಅರಣ್ಯಾಧಿಕಾರಿ ತರಬೇತಿಗೆ 2007ರ ಅಭ್ಯರ್ಥಿಗಳ ಆಯ್ಕೆ ಪರೀಕ್ಷೆ (ಮುಖ್ಯ)**

# ಕಡ್ಡಾಯ ಪರೀಕ್ಷೆ : ಕನ್ನಡ ಭಾಷೆ

3ನೇ ನವೆಂಬರ್ 2007

ಸಮಯ : 3 ಗಂಟೆ (ಬೆಳಿಗ್ಗೆ 10.30 ರಿಂದ ಮಧ್ಯಾನ 1.30 ವರೆಗೆ)

**<u>ಬಹು ಮುಖ್ಯವಾದ ಸೂಚನೆಗಳು:–</u>**

1. ಪರೀಕ್ಷೆ ಆರಂಭವಾದ ನಂತರ ಅಭ್ಯರ್ಥಿಗಳಿಗೆ ಪರೀಕ್ಷಾ ಕೊಠಡಿಯಿಂದ ಹೊರಗೆ ಹೋಗಲು ಯಾವುದೇ ಕಾರಣಕ್ಕೂ ಅವಕಾಶ ಕೊಡಲಾಗುವುದಿಲ್ಲ. ಹೊರಗೆ ಹೋಗಬೇಕಾದರೆ ಅಭ್ಯರ್ಥಿಗಳು ಪ್ರಶ್ನೋತ್ತರ ಪುಸ್ತಕಗಳನ್ನು ಹಿಂತಿರುಗಿಸಿ ಹೋಗಬೇಕು. ಹಾಗೆ ಹೊರಹೋಗುವ ಅಭ್ಯರ್ಥಿಗಳಿಗೆ ಮರುಪ್ರವೇಶದ ಅವಕಾಶ ನೀಡಲಾಗುವುದಿಲ್ಲ.
2. ಪರೀಕ್ಷೆ ಕೊಠಡಿಯಲ್ಲಿ ಸೆಲ್ / ಮೊಬೈಲ ಫೋನ್, ಪೇಜರ್, ಕ್ಯಾಲ್ಕ್ಯುಲೇಟರ್ / ಗಣಕ ಯಂತ್ರ, ಆವರ್ತ ಕೋಷ್ಟಕ, ಪುಸ್ತಕ, ನೋಟ್ ಪುಸ್ತಕ, ಬಿಡಿ ಪೇಪರ್, ಚೀಟಿಗಳು, ಜ್ಯಾಮಿತಿ ಯಂತ್ರ ಪೆಟ್ಟಿಗೆ ಇತ್ಯಾದಿಗಳನ್ನು ತರಲು ಅವಕಾಶ ಇರುವುದಿಲ್ಲ. ಯಾರಾದರು ಅಭ್ಯರ್ಥಿಗಳು ಇವುಗಳನ್ನು ಮುಚ್ಚಿಟ್ಟು ಒಳಗೆ ತಂದರೆ ಅಂತಹವರನ್ನು ಪರೀಕ್ಷೆ ಕೊಠಡಿಯಿಂದ ಹೊರಗೆ ಕಳುಹಿಸಲಾಗುವುದು ಹಾಗೂ ಪರೀಕ್ಷೆಯಲ್ಲಿ ಭಾಗವಹಿಸಲು ನಿರಾಕರಿಸಲಾಗುವುದು.
3. ಅಭ್ಯರ್ಥಿಗಳು ನೀಲಿ ಅಥವ ಕಪ್ಪು ಪೆನ್ನು (ಬಾಲ್ ಪೆನ್ನು) ಬಳಸಿ ಉತ್ತರವನ್ನು ನಿಗದಿತ ಉತ್ತರ ಹಾಳೆಯಲ್ಲಿ ಮಾತ್ರ ಗುರುತಿಸಬೇಕು. ಬೇರೆ ಯಾವ ಸ್ಥಳದಲ್ಲೂ ಬರೆಯಬಾರದು. ಹಾಗೆ ಮಾಡುವ ಅಭ್ಯರ್ಥಿಗಳು ಅನರ್ಹರಾಗುತ್ತಾರೆ.
4. ಅಭ್ಯರ್ಥಿಗಳು ಉತ್ತರ ಹಾಳೆಯಲ್ಲಿ ಸ್ಥಳದಲ್ಲಿ ತಮ್ಮ ನೋಂದಣಿ ಸಂಖ್ಯೆ (Reg. Number) ಬರೆದು ತಮ್ಮ ರುಜು ಮಾಡಬೇಕು. ಈ ಸ್ಥಳವನ್ನು ಬಿಟ್ಟು ಬೇರೆ ಯಾವ ಸ್ಥಳದಲ್ಲಿಯೂ ತಮ್ಮ ಹೆಸರು, ವಿಳಾಸ, ನೋಂದಣಿ ಸಂಖ್ಯೆ ಅಥವಾ ವಿಶೇಷ ಚಿನ್ಹೆಗಳನ್ನು ಬರೆಯಬಾರದು. ಹಾಗೆ ಮಾಡಿದ ಅಭ್ಯರ್ಥಿಗಳ ಉತ್ತರ ಹಾಳೆಯನ್ನು ರದ್ದು ಪಡಿಸಿ ಅವರನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.
5. ಅಭ್ಯರ್ಥಿಗಳು ಉತ್ತರ ಹಾಳೆಯಲ್ಲಿ ಸಂಬಂಧವಿಲ್ಲದ ವಿಷಯಗಳು, ಪರೀಕ್ಷಕರಿಗೆ ಅಥವ ಮೇಲಾಧಿಕಾರಿಗಳಿಗೆ ಅರ್ಜಿ ಮುಂತಾದವುಗಳನ್ನು, ಬರೆಯಬಾರದು, ಅಂತಹ ಅಭ್ಯರ್ಥಿಗಳ ಉತ್ತರ ಪುಸ್ತಕವನ್ನು ರದ್ದುಪಡಿಸಿ ಅವರನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.
6. ಆಭ್ಯರ್ಥಿಗಳು ಪ್ರಶ್ನೆ ಪುಸ್ತಕ ಹಾಗೂ ಉತ್ತರ ಹಾಳೆಯನ್ನು ಪರೀಕ್ಷೆ ಮುಗಿಸಿದ ನಂತರ ಅಧಿಕಾರಿಗಳಿಗೆ ಹಿಂತಿರುಗಿಸಿಯೇ ಪರೀಕ್ಷಾ ಕೋಠಡಿಯಿಂದ ಹೊರಗೆ ಹೋಗಬಹುದು. ಪ್ರಶ್ನೆ ಪುಸ್ತಕವನ್ನಾಗಲಿ ಉತ್ತರ ಹಾಳೆಯನ್ನಾಗಲಿ ಅದರಿಂದ ಹಾಳೆಗಳನ್ನಾಗಲಿ ತೆಗೆದುಕೊಂಡು ಹೋಗಲು ಅವಕಾಶ ಕೊಡಲಾಗುವುದಿಲ್ಲ.
7. ಪರೀಕ್ಷೆ ಅನ್ಯಾಯಪರ ಮಾರ್ಗವನ್ನು ಅನುಸರಿಸಿದ ಅಭ್ಯರ್ಥಿಗಳ ಮೇಲೆ ಕಟ್ಟು ನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುವುದು. ಅಂತಹವರನ್ನು ಮುಂದೆ ನಡೆಯಲಿರುವ ಇಲಾಖೆಯ ಆಯ್ಕೆಗೆ ಅನರ್ಹರೆಂದು ಘೋಷಿಸಲಾಗುವುದು.
8. ಪರೀಕ್ಷೆ ಕೋಠಡಿಯಲ್ಲಿ ಗಲಾಟೆ ಗದ್ದಲ ಮಾಡುವ / ಎಬ್ಬಿಸುವ ಅಭ್ಯರ್ಥಿಗಳನ್ನು ಕೋಠಡಿಯಿಂದ ಹೊರಗೆ ಕಳುಹಿಸಲಾಗುವುದು ಹಾಗೂ ಆಯ್ಕೆ ಪ್ರಕ್ರಿಯೆಯಿಂದ ಹೊರಹಾಕಲಾಗುವುದು.
9. ಪರೀಕ್ಷೆ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಸೂಚನೆಗಳು ಕೂಡ ಅನ್ವಯಿಸುತ್ತದೆ.

**ಭಾಗ ಅ : ಪ್ರತಿಯೊಂದು ಪ್ರಶ್ನೆಗೂ ಒಂದು ಅಂಕ** **10X1**

1) ಕನ್ನಡದಲ್ಲಿ ರಾಷ್ಟ್ರಕವಿ ಗೌರವ ಪಡೆದ ಕವಿಗಳ ಸಂಖ್ಯೆ
   ಅ) ಒಂದು ಆ) ಎರಡು ಇ) ಮೂರು
2) ಶಿವರಾಮಕಾರಂತರು ಒಬ್ಬ
   ಅ) ಕವಿ ಆ) ಕಥೆಗಾರ ಎ) ಕಾದಂಬರಿಗಾರ
3) "ಚಿದಂಬರ ರಹಸ್ಯ" ಎಂಬ ಕಾದಂಬರಿ ಬರೆದ ಲೇಖಕ
   ಅ) ಈಚನೂರು ಶಾಂತ ಆ) ಪೂರ್ಣಚಂದ್ರ ತೇಜಸ್ವಿ ಇ) ಎಸ್.ಎಲ್.ಬೈರಪ್ಪ
4) ಅಲ್ಲಮಪ್ರಭು ಎಂಬುವವ
   ಅ) ದಾರ್ಶನಿಕ ಆ) ವಚನಕಾರ ಇ) ಹೋರಾಟಗಾರ
5) "ಕುಸುಮ ಬಾಲೆ" ಎಂಬುದು
   ಅ) ಕವನ ಸಂಕಲನ ಆ) ಕಥೆ ಇ) ಕಾದಂಬರಿ
6) ಕನ್ನಡದ ಮೊದಲ ಮಹಾಕವಿ
   ಅ) ಪಂಪ ಆ) ಪೊನ್ನ ಇ) ರನ್ನ
7) ಕರ್ನಾಟಕ ಸಾಹಿತ್ಯ ಆಕಾಡಮಿ ಇರುವ ಸ್ಥಳ
   ಅ) ಮೈಸೂರು ಆ) ಬೆಂಗಳೂರು ಇ) ಧಾರವಾಡ
8) ಡೊಳ್ಳು ಎಂಬುದು ಒಂದು
   ಅ) ಊದುವ ವಾದ್ಯ ಆ) ಚರ್ಮವಾದ್ಯ ಇ) ಕಂಸಾಳೆ
9) ಚದುರಂಗ ಎಂಬುವವರು ಕನ್ನಡದ
   ಅ) ಲೇಖಕ ಆ) ಆಟ ಇ) ಸ್ಥಳ
10) ರಾಮಧಾನ್ಯ ಚರಿತೆ ಬರೆದವರು
   ಅ) ಕನಕದಾಸರು ಆ) ಪುರಂದರದಾಸರು ಇ) ವಿಠಲದಾಸರು

**ಭಾಗ ಆ: ಪ್ರತಿಯೊಂದು ಪ್ರಶ್ನೆಗೆ ಒಂದು ಅಂಕ** **10X1**

**ಬಿಟ್ಟ ಸ್ಥಳಗಳಲ್ಲಿ ಸೂಕ್ತ ಪದಗಳನ್ನು ತುಂಬಿರಿ.**

1) ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿ .........................
2) "ರಾಮಯಣ ದರ್ಶಣಂ" ಕೃತಿಯ ಕರ್ತೃ ...............................................
3) "ಕಟ್ಟುವೆವು ನಾವು" ಕವನದ ಕವಿ .......................................................
4) ಈಗಿನ ಕನ್ನಡ ಅಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷರು ..............................
5) ಚಂಪಾ ಎಂಬುವವರ ಪೂರ್ಣ ಹೆಸರು ................................................
6) "ಜಾನಪದ ಲೋಕ" ಎಂಬುದು .........................................................
7) ಹೊಸದಾಗಿ ನಾಮಕರಣಗೊಂಡ ಜಿಲ್ಲೆಗಳು...........................................
8) ಸವದತ್ತಿ ಸ್ಥಳದ ವಿಶೇಷ ...............................................................
9) ಕನ್ನಡದ ಕಣ್ವ ಎಂಬ ಹೆಸರು ಪಡೆದವರು .....................................
10) ದಸರಾ ಎಂಬುದು ಒಂದು ............................................................

**ಭಾಗ ಇ: ಕೆಳಗಿನ ಎರಡು ಗಾದೆಗಳ ಆಶೆಯವನ್ನು ತಿಳಿಸಿ** **2**
**x 5**

1) ಸಾವಿರ ವರ್ಷ ಸಾಮು ಮಾಡಿ ಸಾಯೋ ಮುದುಕಿ ಸೊಂಟ ಮುರಿದ.
2) ಆಕಾಶ ನೋಡಲು ನೂಕಾಟ ಬೇಕೆ.
3) ಅಪ್ಪಗೊಂದು ಕಾಲ ಸೊಸೆಗೊಂದು ಕಾಲ.
4) ಜನಮರುಳೊ ಜಾತ್ರೆ ಮರುಳೊ.

**ಭಾಗ ಈ:**

**ಕೆಳಗಿನ ಯಾವುದಾದರು ಒಂದು ವಿಷಯ ಕುರಿತು ಕನಿಷ್ಠ 300 ಪದಗಳ ಪ್ರಬಂದ ಬರೆಯಿರಿ**
**15**

1) ಭಯೋತ್ಪಾದನೆಯು ಒಂದು ಉದ್ಯಮ
2) ಕನ್ನಡ ಶಾಸ್ತ್ರಿಯ ಭಾಷೆಯಾಗುವುದರ ಅನುಕೂಲ
3) ಖಾಸಗೀಕರಣದ ಸಾಧಕ–ಬಾದಕಗಳು

**ಭಾಗ ಉ:** **10**

ಈಗಾಗಲೇ ನೀವು ಸರ್ಕಾರಿ ಹುದ್ದೆಯಲ್ಲಿದ್ದು ಕಛೇರಿಗೆ ತಡವಾಗಿ ಬಂದುದಕ್ಕೆ ಕಾರಣಕೊಟ್ಟು ನಿಮ್ಮ ಹಿರಿಯ ಅಧಿಕಾರಿಗೆ ಪತ್ರ ಬರೆಯಿರಿ

ಅಥವಾ

ನಿಮ್ಮ ಹೊಸ ಕೆಲಸದಲ್ಲಿ ನೀವು ಕಂಡುಂಡ ಅನುಭವವನ್ನು ಕುರಿತು ನಿಮ್ಮ ಮಿತ್ರನಿಗೆ ಪತ್ರ ಬರೆಯಿರಿ.

**ಭಾಗ ಊ: ಆವರಣದಲ್ಲಿ ಕೊಟ್ಟಿರುವ ಸೂಚನೆಗೆ ಅನುಗುಣವಾಗಿ ಕೆಳಗಿನ ವಾಕ್ಯಗಳನ್ನು ಬದಲಾಯಿಸಿ**
10

x 1

1) ಅವರು ಈಗ ತಾನೆ ಬಂದರು (ಬೂತಕಾಲಕ್ಕೆ ಬದಲಾಯಿಸಿ)
2) ನಮ್ಮ ನಾಡು ಕನ್ನಡ ನಾಡು (ಏಕ ವಚನಕ್ಕೆ)
3) ಒಳ್ಳೆಯ ಕಾಲ ಬಂದೇ ಬಂತು (ಭವಿಷತ್ ಕಾಲಕ್ಕೆ)
4) ಅವನು ಮತ್ತು ಅವಳು ಗಂಡ ಮತ್ತು ಹೆಂಡತಿ (ಸರಿಪಡಿಸಿ)
5) ಧರ್ಮ ಮತ್ತು ಕರ್ಮ ನನ್ನದೆ ಸಂಪಾದನೆ (ಬಹುವಚನಕ್ಕೆ)
6) ಹುಡುಗರೆ  ಹಾಗೆ! (ಸ್ತ್ರೀಲಿಂಗಕ್ಕೆ ಬದಲಾಯಿಸಿ)
7) ರಾಯರು ಚನ್ನಾಗಿದ್ದಾರೆ (ಪ್ರಶ್ನಾರ್ಥಕ ವಾಕ್ಯ ಮಾಡಿ)
8) ಮಗುವಿನ ಮನಸು ಹೂವಿನ ಮನಸು (ಬಹುವಚನಕ್ಕೆ)
9) ಹೆಣ್ಣೊಂದು ಗಂಡಾರು (ಪುಲ್ಲಿಂಗಕ್ಕೆ)
10) ಆಳು ಅಡ್ಡಾದಿಡ್ಡಿ ಮಾತು ಮಲ್ಲಿಗೆ (ಗುಣವಾಚಕಗಳನ್ನು ಗುರುತಿಸಿ)

ಭಾಗ ಎ:

**ಅ) ಕೆಳಗಿನ ವಾಕ್ಯಗಳಲ್ಲಿ ತಪ್ಪುಗಳನ್ನು ತಿದ್ದಿ ಬರೆಯಿರಿ** **5X 1**

1) ಅದು ರಾಮು ಬಾಣ

2) ಮೈಲಾರ ದಾರಿದೂರ
3) ಅವನು ಮಂತ್ರಿ ಮಗ
4) ಯಶವಂತ ರಾಮು ಯಲ್ಲಾಪುರಕ್ಕೆ ಹೋದರು
5) ಕನ್ನಡ ಕೆಲಸ ಜನತೆ ಕೆಲಸ.

**ಆ) ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ಭರ್ತಿಮಾಡಿ** **8 X 1**

1) "ಕಿರುಗೆಜ್ಜೆ" ಇದು ............................ ಸಮಾಸಕ್ಕೆ ಉದಾಹರಣೆ
2) ತಲೆ ಎತ್ತು ಇದು ............................ ಸಂದಿಗೆ ಉದಾಹರಣೆ
3) ಚಂದ್ರಮುಖಿ ಎಂಬುದು ........................... ಅಲಂಕಾರಕ್ಕೆ ಉದಾಹರಣೆ
4) ರಗಳೆ ಛಂದಸ್ಸು .................... ಸಾಲುಗಳಿಂದ ಕೂಡಿದೆ.
5) ಕುಮಾರವ್ಯಾಸ ಬಳಸಿದ ಛಂದಸ್ಸು.....................
6) ಕುಂಬಳ ಎನ್ನುವ ಕನ್ನಡ ಪದಕ್ಕೆ ಸಮಾನವಾದ ಸಂಸ್ಕೃತ ಪದ .............
7) ಕೇಶಿರಾಜ ಬರೆದ ಲಕ್ಷಣ ಗ್ರಂಥ ..............
8) ಕನ್ನಡ ಕೈಪಿಡಿ ...................... ಇವರಿಂದ ಪ್ರಕಟವಾಗಿದೆ.

**ಭಾಗ ಏ**

**ಅ) ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ** **6**

**X 1/2**

1) ಅನುಸಂದಾನ
2) ಕಾರ್ಗತ್ತಲೆ
3) ಭೀಮಬಲ
4) ವರಹ
5) ಅಪಕಲ್ಪನೆ
6) ಆಪದ್ಧನ

**ಆ) ಕೆಳಗಿನ ಪದಗಳಿಗೆ ವಿರುದ್ದಾರ್ಥಕ ಪದ ಬರೆಯಿರಿ** **6 X 1/2**

1) ಹಿಗ್ಗು
2) ಹೊಗಳು
3) ಉದಯ
4) ವಿಷ
5) ವೃದ್ಧಿ
6) ಪ್ರಾಚೀನ

**ಇ) ಕೆಳಗಿನ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ** **6**

**X 1/2**

1) ಭಂಗ
2) ಹಂಸ
3) ಆರ್ಯ
4) ಅಕ್ಷರ
5) ಹರಣ
6) ಮೃಗ

**ಈ) ಅಕ್ಷರಗಳಲ್ಲಿ ಬರೆಯಿರಿ** **4 X 1/2**

1) $7\ ^{3}/_{4}$
2) $3\ ^{1}/_{2}$
3) 22607
4) $16\ ^{1}/_{4}$

ಭಾಗ ಐ

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ** **6 X 1/2**

| | |
|---|---|
| 1) ತಿಳಿಗೊಳ | 4) ವಿಜಯೋನ್ಮತ್ತ |
| 2) ಏನೇನು | 5) ನಕ್ಷತ್ರಾಕಾರ |
| 3) ಲೆಕ್ಕಾಚಾರ | 6) ಕೊರಳೊಡ್ಡು |

**ಆ) ಸೇರಿಸಿ ಬರೆಯಿರಿ** **6 X 1/2**

| | |
|---|---|
| 1) ಅಲ್ಲಿ + ಅಲ್ಲಿ | 4) ಮಹಾ + ಉದಯ |
| 2) ಕಿರಿಯ + ದಾರಿ | 5) ಕನಸು + ಉಣೆ |
| 3) ಪೆನ್ನು + ಅನ್ನು | 6) ಮಗ + ಅನ್ನು |

ಭಾಗ –ಒ

**ಈ ಕೆಳಗಿನ ಗದ್ಯಭಾವನ್ನು ಓದಿಕೊಂಡು ಅದರ ಕೆಳಗಿರುವ ಪ್ರಶ್ನೆಗಳಿಗೆ ಉತ್ತರಿಸಿ** **5 X 4**

ನಾವೆಲ್ಲ ಮನುಷ್ಯರು. ಗಂಡು–ಹೆಣ್ಣು ಎಂಬುದಕ್ಕೆ ವ್ಯತ್ಯಾಸ. ಈ ವ್ಯತ್ಯಾಸ ನೈಸರ್ಗಿಕವಾದುದು. ಇದನ್ನು ಮೀರಲು ಸಾಧ್ಯವಾಗದು. ಇಂಥ ವ್ಯತ್ಯಾಸಗಳನ್ನು ನೈಸರ್ಗಿಕ ವಿಶಿಷ್ಟತೆಗಳು ಎನ್ನುತ್ತೇವೆ. ವರ್ಣ, ಜಾತಿ, ವರ್ಗ, ಪಂಗಡ, ಪಂಥ ಈ ಮೊದಲಾದವು ಸಮಾಜ ಸೃಷ್ಟಿಸಿದ ವಿಶಿಷ್ಟತೆಗಳು. ಇವುಗಳನ್ನು ಸಾಮಾಜಿಕ ಐಡೆಂಟಿಟಿಗಳು ಎನ್ನುತ್ತಾರೆ. ಇವು ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ಕಾರಣಕ್ಕಾಗಿ ಹುಟ್ಟಿದವು. ವರ್ಣ ಮತ್ತು ಜಾತಿಗಳು ಶ್ರೇಷ್ಠತೆ ಮತ್ತು ಕನಿಷ್ಠತೆ ತತ್ವದ ಮೇಲೆ ಹುಟ್ಟಿದವು. 'ವರ್ಗ' ಎಂಬುದು ಆರ್ಥಿಕ ಸ್ಥಿತಿಗತಿಯ ಆಧಾರದ ಮೇಲೆ ಹುಟ್ಟಿತು. ಪಂಗಡ ಎಂಬುದು ಒಂದು ಸಮುದಾಯ ತನ್ನನ್ನು ಒಟ್ಟಾಗಿ ಗುರುತಿಸಿಕೊಳ್ಳಲು ಹುಟ್ಟಿತು. 'ಪಂಥ' ಎಂಬುದು ಒಂದು ತತ್ವ ಸಿದ್ಧಾಂತಕ್ಕೆ ಬದ್ಧವಾದ ಗುಂಪು ಎನಿಸಿಕೊಳ್ಳುತ್ತದೆ. ಇವುಗಳನ್ನು ಸಮಾಜಿಕ ವಿಶಿಷ್ಟತೆ ಎಂಥಲು, ವೈಜ್ಞಾನಿವಾಗಿ ಯೋಜಿಸಿದರೆ ತಾರತಮ್ಯ ಅಳತೆಗಳು ಎಂದು ಕರೆಯಲಾಗುತ್ತದೆ. ಈ ಸಾಮಾಜಿಕ ತಾರತಮ್ಯಗಳನ್ನು ಮೀರಬಹುದು. ನೈಸರ್ಗಿಕ ವಿಶಿಷ್ಟತೆಗಳನ್ನು ಮೀರಲು ಸಾಧ್ಯವಾಗದು. ಈ ಹೊತ್ತು ಸಮಾನತೆ ಮತ್ತು ಸಹಬಾಳ್ವೆ ಎಂಬ ತತ್ವ ಜಾರಿಯಲ್ಲಿದೆ. ಅಂಥ ಸಂದರ್ಭದಲ್ಲಿ ಭಾರತ ದೇಶ ತನ್ನ ಅಭಿವೃದ್ದಿಗಾಗಿ ಸಾಮಾಜಿಕ ತಾರತಮ್ಯಗಳನ್ನು ಮೀರುವ ಅವಶ್ಯಕತೆ ಇದೆ.

ಪ್ರಶ್ನೆಗಳು:–

1) ನೈಸರ್ಗಿಕ ವ್ಯತ್ಯಾಸ ಹಾಗೂ ಸಾಮಾಜಿಕ ತಾರತಮ್ಯದ ಮಧ್ಯ ಇರುವ ಅಂತರವೇನು?
2) ಪಂಥ ಪಂಗಡಗಳ ಹುಟ್ಟಿನ ಹಿನ್ನಲೆ ಏನು?
3) ಆರ್ಥಿಕತೆ ಸಮಾಜದ ಮೇಲೆ ಯಾವ ಬಗೆಯ ಪರಿಣಾಮವನ್ನು ಉಂಟುಮಾಡುತ್ತದೆ.
4) ಈ ಹೊತ್ತಿನ ನಮ್ಮ ಸಾಮಾಜಿಕ ಜವಾದ್ದಾರಿ ಏನು?